ಜಿಜ್ಞಾಸೆಯ ಉತ್ತರವಾಗಿದೆ. ನಮ್ಮ ಕರ್ನಾಟಕ ರಾಜ್ಯ ರಾಷ್ಟ್ರದಲ್ಲಿ ತಾಳೆ ಬೆಳೆಯನ್ನು ಬೆಳೆಯುವುದಕ್ಕೆ ಪ್ರಶಸ್ತವಾಗಿದ್ದು ಸುಮಾರು 2 ಲಕ್ಷ ಹೆಕ್ಟೇರ್‌ಗಳಷ್ಟು ಹೆಚ್ಚಿನ ಪ್ರದೇಶ ಈ ವ್ಯಾಪ್ತಿಗೆ ಬರುತ್ತದೆಂದು ಗುರ್ತಿಸಿ ಶಿವಮೊಗ್ಗದಲ್ಲಿ ಪೈಲಟ್ ಪಾಜೆಕ್ಟ್‌ನ್ನು ಪ್ರಾರಂಭಿಸಲು ಸುಮಾರು 1000 ಹೆಕ್ಟೇರ್‌ನ್ನು ತೆಗೆದುಕೊಳ್ಳಲಾಗಿದೆ ಎಂದು ಉತ್ತರದಲ್ಲಿ ತಿಳಿಸಿರುತ್ತಾರೆ. 1993 ಜೂನ್‌ನಲ್ಲಿ, ತಾಳೆ ಕೊಯ್ಯಲಿಗೆ ಬರುತ್ತಿರತಕ್ಕಂಥ ಸಂದರ್ಭದಲ್ಲಿ ಇದರ ಪರಿಣಾಮ ಇತರ ರೈತರ ಮೇಲೆ ಆಗುವುದರಿಂದ First impression is the best impression ಎಂದು ಹೇಳುವಂತಹ ಒಂದು ಯುಕ್ತಿಯಂತೆ ಈ ತಾಳೆಎಣ್ಣೆ ಘಟಕ ಪ್ರಾರಂಭವಾಗದಿದ್ದರೆ ರೈತರಿಗೆ ಬಹಳ ನಷ್ಟವಾಗುತ್ತದೆ. ಇದು ಇನ್ನೂ ಪ್ರಾಸ್ತಾವಿಕ ಹಂತದಲ್ಲಿ ಇರುವ ಹಾಗೆ ಕಾಣಿಸುತ್ತದೆ. ಖಚಿತವಾಗಿ 1993ರ ಜೂನ್‌ನಲ್ಲಿ ಈ ಒಂದು ಘಟಕ ಪ್ರಾರಂಭವಾಗುತ್ತದೆಯೇ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ. ಒಂದು ಪಕ್ಷ ಇದು ಪ್ರಾರಂಭವಾಗದೇ ಇದ್ದಲ್ಲಿ ರೈತರು ಬೆಳೆದ ತಾಳೆಬೆಳೆಗಳನ್ನು, ಹಣ್ಣನ್ನು ತೆಗೆದುಕೊಳ್ಳುವುದಕ್ಕೆ ಏನು ಏರ್ಪಾಡು ಮಾಡುತ್ತೀರಿ? ಒಂದು ಪಕ್ಷ ನಷ್ಟವಾದರೆ, ಈ ಕಂಪನಿ ನಷ್ಟವನ್ನು ತುಂಬಿಕೊಡುತ್ತಿದೆಯೇ? ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ:- ಮಾನ್ಯ ಅಧ್ಯಕ್ಷರೇ, ಭದ್ರಾ ಬೇಸಿನ್ ಎಕ್ಸ್‌ಪರೀಮೆಂಟಲ್ ಪ್ರಾಜೆಕ್ಟ್ ಎಂದು ಪ್ರಾರಂಭ ಮಾಡಿ 1100 ಎಕರೆ ಜಮೀನಿನಲ್ಲಿ ತಾಳೆ ಮರಗಳನ್ನು ಈಗಾಗಲೇ ಬೆಳೆಸಿದೆ; ಮತ್ತು ತಾಳೆ ಎಣ್ಣೆ ಸಂಸ್ಕರಣದ ಘಟಕದ ಸಿವಿಲ್ ವರ್ಕ್ ಮಾಡಿ ಆಗಿದೆ. ಇತರೇ ಕೆಲಸಗಳೂ ಸಹ ಈಗಾಗಲೇ ಪ್ರಾರಂಭವಾಗಿವೆ. ಫಾರಿನ್‌ನಿಂದ ಏನು ಮೆಷಿನರಿ ಬರಬೇಕು ಆ ಮೆಷಿನರಿಗಳು ಏಪ್ರಿಲ್ ಕೊನೆಯ ವೇಳೆಗೆ ಬರುವ ನಿರೀಕ್ಷೆ ನಮಗಿದೆ. ನಮ್ಮ ದೇಶದಲ್ಲೇ ಸಿಗುವಂತಹ ಮೆಷಿನರಿಗಳು ಬಂದು ಆಗಲೇ ಫ್ಯಾಬ್ರಿಕೇಷನ್ ಆಗಿದೆ ಮತ್ತು ಎಲೆಕ್ಟ್ರಿಸಿಟಿ ಸ್ಯಾಂಕ್ಷನ್ ಆಗಿದೆ. ಅದಕ್ಕೆ 5.4 ಲಕ್ಷ ರೂಪಾಯಿಗಳು ಡಿಪಾಸಿಟ್ ಮಾಡಿದ್ದಾರೆ. ಈ ಜೂನ್ ಕೊನೆಯ ವೇಳೆಗೆ ಹಾರ್‌ವೆಸ್ಟ್ ಬರುತ್ತದೆ ಹಣ್ಣುಗಳು ಫಲಕ್ಕೆ ಬರುತ್ತವೆ ಎನ್ನುವುದನ್ನು ತಾವೇ ತಿಳಿಸಿದ್ದೀರಿ. ನಾವು ಓಸ್ವಾಲ್ ಕಂಪನಿಯವರ ಹತ್ತಿರ ಸಹ ಚರ್ಚೆ ಮಾಡಿದ್ದೇವೆ. ಅವರು ರೈತರಿಗೆ ಯಾವ ರೀತಿಯಲ್ಲೂ ತೊಂದರೆಯಾಗದಂತೆ ಹಣ್ಣುಗಳು ಯಾವಾಗ ಮಾರುಕಟ್ಟೆಗೆ ಕೊಡುತ್ತಾರೆ ಆಗ ಅದನ್ನು ಬೈ ಮಾಡುತ್ತೇವೆ ಎಂದು ಆಶ್ವಾಸನೆಯನ್ನು ಸಹ ಅವರು ಕೊಟ್ಟಿದ್ದಾರೆ. ಅಕಸ್ಮಾತ್ ಏನಾದರೂ ಈ ಘಟಕ ಪ್ರಾರಂಭವಾಗುವುದಕ್ಕೆ 15-20 ದಿವಸಗಳು ತಡವಾದರೂ ಸಹ ನಾವು ಇಂಡಿಜಿನಸ್ ಇಂಜಿನಿಯಸ್ ಮೆಥಡ್‌ನಲ್ಲಿ ಈ ಆಯಿಲ್ ಎಕ್ಟ್ರಾಕ್ಷನ್ ಮಾಡಿ ನಾವು ರೈತರಿಗೆ ತೊಂದರೆಯಾಗದ ರೀತಿಯಲ್ಲಿ ನೋಡಿಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಆದ್ದರಿಂದ ರೈತರಿಗೆ ಯಾವುದೇ ರೀತಿಯ ತೊಂದರೆಯಾಗುವುದಿಲ್ಲ.

2. ಭದ್ರಾವತಿ ಕಾಗದ ಕಾರ್ಖಾನೆಯಲ್ಲಿ ಬಿಸಾಡುತ್ತಿದ್ದ ಸುಣ್ಣದ ಪುಡಿಯನ್ನು ಜಿಪ್ಸಮ್ ಎಂದು ಮೋಸದ ರೀತಿ ವ್ಯಾಪಾರ ಮಾಡುತ್ತಿರುವ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆಯ ಶ್ರೇಷ್ಠ ಕೈಗಾರಿಕೆಯಾದಂತಹ ಭದ್ರಾವತಿ ಕಾಗದ ಕಾರ್ಖಾನೆಯಲ್ಲಿ ಬಳಸಿ ಬಿಸಾಡುತ್ತಿದ್ದ ಸುಣ್ಣದ ಪುಡಿಯನ್ನು ಖಾಸಗಿಯವರಿಗೆ ಗುತ್ತಿಗೆಗೆ ಕೊಟ್ಟು ಅದನ್ನು ಉತ್ತಮ ಚೀಲಗಳಲ್ಲಿ ತುಂಬಿ ಉತ್ತರ ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ಅದನ್ನು ಜಿಪ್ಸಮ್ ಎಂದು ಮೋಸ ಮಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿದೆಯೇ. ಅಲ್ಲಿಯ ಪ್ರಗತಿಪರ ರೈತರಾದಂತಹ ಶ್ರೀ ಪ್ರಪುಲ್ ಚಂದ್ರರವರು ನಮಗೆ ಪತ್ರ ಬರೆದು ಇಡೀ ರಾಜ್ಯದ ರೈತರಿಗೆ ಯಾರೋ ಕೋಟ್ಯಾಧಿಪತಿಗಳಾಗುವುದಕ್ಕೋಸ್ಕರ ಈ ಕುತಂತ್ರ ನಡೆಯುತ್ತಿದೆ. ಇದರ ಬಗ್ಗೆ ವಿಶೇಷವಾದಂತಹ ಗಮನ ಕೊಡಬೇಕೆಂದು ಹೇಳಿ ಅವರು ಪತ್ರ ಬರೆದಿದ್ದರು. ಅದಕ್ಕಾಗಿ ಗಮನ ಸೆಳೆಯುವ ಸೂಚನೆಯ ಮೂಲಕ ಸರ್ಕಾರವನ್ನು ಕೇಳುತ್ತಿದ್ದೇನೆ. ದಯಮಾಡಿ, ಇದರಲ್ಲಿ ಏನು ನಡೆದಿದೆ, ಗುತ್ತಿಗೆಗೆ ಕೊಟ್ಟಿರುವುದು ನಿಜವೇ? ಅದು ಜಿಪ್ಸಮ್ ಎಂದು ಹೇಳಿ ರೈತರಿಗೆ ಮೋಸ ಮಾಡಿರುವುದು ನಿಜವೇ? ಇದರ ಬಗ್ಗೆ ಸಂಬಂಧಪಟ್ಟ ಸಚಿವರು ಉತ್ತರ ಕೊಟ್ಟರೆ ನಂತರ ನಾವು ಉಪ ಪ್ರಶ್ನೆಯನ್ನು ಕೇಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ:- (ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಸಚಿವರು) ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ನೀಡುತ್ತೇನೆ.

ಮೈಸೂರು ಕಾಗದ ಕಾರ್ಖಾನೆಯಲ್ಲಿ ಸುಣ್ಣದಪುಡಿ ಉತ್ಪಾದನೆಯಾಗುತ್ತಿದ್ದು ಅದನ್ನು ಶೇಖರಣ ಸ್ಥಳದಲ್ಲಿ ಶೇಖರಿಸಲಾಗುತ್ತಿತ್ತು. ಕಾರ್ಖಾನೆಗೆ ಇದು ನಿರುಪಯುಕ್ತವಾಗಿದ್ದರೂ ಸಹ ಸ್ಥಳೀಯರು ಈ ವಸ್ತುವನ್ನು ವ್ಯವಸಾಯಕ್ಕಾಗಿ ಬಳಸುತ್ತಿದ್ದರು. ನಿಧಾನಗತಿಯಲ್ಲಿ ಈ ಸುಣ್ಣದ ಪುಡಿಯು ಖಾಲಿಯಾಗುತ್ತಿದ್ದರಿಂದ ಮಾಲಿನ್ಯದ ಸಮಸ್ಯೆಗಳೂ, ಪರಿಸರ ಸಂಬಂಧಿತ ಹಾನಿಗಳೂ ಉಂಟಾಗುತ್ತಿದ್ದವು. ಇದೂ ಅಲ್ಲದೇ ವ್ಯವಸಾಯ ಉದ್ದೇಶಕ್ಕೂ ಇದರ ಬಳಕೆಯಾಗುತ್ತಿದ್ದು ಈ ವಸ್ತುವಿಗೆ ಬೆಲೆ ಇರುವುದನ್ನು ಕಂಡುಕೊಳ್ಳಲಾಯಿತು.

ಸುಣ್ಣದ ಧೂಳನ್ನು ಕ್ಷಿಪ್ರವಾಯಿಯಿಂದ ಖಾಲಿ ಮಾಡುವ ಉದ್ದೇಶದಿಂದ, ಮಾಲಿನ್ಯ ಸಮಸ್ಯೆಯನ್ನು ಹತ್ತಿಕ್ಕುವ ಉದ್ದೇಶದಿಂದ ಮತ್ತು ಬಿಸಾಡುತ್ತಿದ್ದ ನಿರುಪಯುಕ್ತ ವಸ್ತುವಿಗೆ ಇರುವ ಬೆಲೆಯ ಲಾಭವನ್ನು ಪಡೆಯುವ ಉದ್ದೇಶದಿಂದ ಈ ನಿರುಪಯುಕ್ತ ವಸ್ತುವನ್ನು ವಿಲೇವಾರಿ ಮಾಡುವ ಉದ್ದೇಶದಿಂದ ಟೆಂಡರ್ ಕರೆಯಲಾಯಿತು. ಇದಕ್ಕೆ ಉತ್ತರವಾಗಿ ಬಂದ ಟೆಂಡರ್‌ಗಳನ್ನು ಗಮನಿಸಿ ಭದ್ರಾವತಿಯ ಶ್ರೀ ಶಂಕರ್ ಟ್ರೇಡಿಂಗ್ ಕಂಪನಿ ಎಂಬುವವರಿಗೆ ಸುಣ್ಣದಪುಡಿ ಸಾಗಣೆ ಮಾಡುವ ಕೆಲಸವನ್ನು ವಹಿಸಿಕೊಡಲಾಯಿತು. ಇದರಿಂದಾಗಿ ಕಂಪನಿಗೆ ಆದಾಯ ಬರುತ್ತಿದೆ. ಮಾಲಿನ್ಯ ನಿಯಂತ್ರಣ ಮಾಡುವುದರಲ್ಲಿಯೂ ಸಹಕಾರಿಯಾಗಿದೆ. ಕಂಪನಿಯ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಈ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸುಣ್ಣದ ಧೂಳನ್ನು "ಜಿಪ್ಸಂ" ಎಂದು ಹೇಳಿ ರೈತರಿಗೆ ಮಾರಲಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಹೀಗಾಗಿ ಈ ನಿರುಪಯುಕ್ತ ವಸ್ತುವು ಸ್ಥಳೀಯರಿಗೆ ಈಗ ಉಚಿತವಾಗಿ ಲಭ್ಯವಾಗುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಸಚಿವರು ಬಹುಶಃ ಮೈಸೂರು ಕಾಗದದ ಕಾರ್ಖಾನೆಯ ಪಕ್ಕದ ರಸ್ತೆಯಲ್ಲಿ ಒಂದು ಸಾರಿ ಹೋಗಿ ಬಂದರೆ ಮನವರಿಕೆಯಾಗುತ್ತದೆ. ನಾವು ಕಳೆದ 15-20 ವರ್ಷಗಳಿಂದ ಓಡಾಡುತ್ತಿದ್ದೇವೆ. ಈ ಕಾರ್ಖಾನೆಯವರು ಬಳಸಿ ಬಿಸಾಡುತ್ತಿರುವ ಈ ಸುಣ್ಣ ಸುಮಾರು ಸಾವಿರಾರು ಲೋಡ್ ಬಿದ್ದಿದೆ.

ಅದು ಉಪಯೋಗವಿಲ್ಲದೆ ರಸ್ತೆಯಲ್ಲಿ ಬಿದ್ದಿರುವುದೇ ಹೊರತು ಅದನ್ನು ಯಾವುದೇ ಶೇಖರಣ ಕೇಂದ್ರದಲ್ಲಿ ಶೇಖರಣೆ ಮಾಡಿ ಇಟ್ಟಿಲ್ಲ. ಇದು ನಿರುಪಯುಕ್ತ ವಸ್ತು ನಮ್ಮ ಕಾರ್ಖಾನೆಗೆ ಆದಾಯ ಬರಲಿ ಎನ್ನುವ ದೃಷ್ಟಿಯಿಂದ ಅದನ್ನು ಶಂಕರ್ ಟ್ರೇಡಿಂಗ್ ಕಂಪನಿಯವರಿಗೆ ಕೊಟ್ಟಿದ್ದೇವೆ ಎನ್ನುವಂತಹ ಮಾತನ್ನು ಹೇಳಿದ್ದೀರಿ. ಇದಕ್ಕೆ ನೀವು ಟೆಂಡರ್ ಕರೆದಿದ್ದೀರ?, ಅದರಲ್ಲಿ ಯಾರ್ಯಾರು ಭಾಗವಹಿಸಿದ್ದರು? ಎಷ್ಟಕ್ಕೆ ಅದು ಟೆಂಡರ್ ಆಗಿದೆ? ಇದನ್ನು ಜಿಪ್ಸಮ್ ಎಂದು ಮಾರುತ್ತಿರುವುದರ ಬಗ್ಗೆ ಬಹಳ ಸ್ಪಷ್ಟವಾದಂತಹ ಮಾಹಿತಿಗಳು ನನ್ನ ಹತ್ತಿರ ಇದೆ. ಇದನ್ನು ಉತ್ತರ ಕರ್ನಾಟಕದ ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಮಾರುತ್ತಿದ್ದಾರೆ. ರಸಗೊಬ್ಬರದ ಬೆಲೆ ಗಗನಕ್ಕೆ ಏರಿರುವಂತಹ ಸಂದರ್ಭದಲ್ಲಿ, ಯಾವುದೇ ಒಂದು ಒಳ್ಳೆಯ ಚೀಲದಲ್ಲಿ ಇದನ್ನೇನಾದರೂ ತುಂಬಿಕೊಂಡು ಇದು ರೈತನಿಗೆ ಅನುಕೂಲವಾಗುತ್ತಿದೆ ಎಂದು ಹೇಳಿದರೆ ಅವನು ಎಷ್ಟಕ್ಕೆ ಬೇಕಾದರೂ ಇದನ್ನು ಕೊಂಡುಕೊಳ್ಳುವಂತಹ ಸ್ಥಿತಿ ಇದೆ. ಅದುದರಿಂದ ಇದನ್ನು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನವರಿಂದ ತನಿಖೆ ಮಾಡಿಸಿ, ಅದು ನಿಮ್ಮ ಕರ್ತವ್ಯ ಇದೆ. ರೈತರು ಇದನ್ನು ಉಪಯೋಗ ಮಾಡಿದರೆ ಬೆಳೆ ನಾಶವಾಗುತ್ತಿದೆ. ಹಿಂದೆ ರೈತರು ಗೊಬ್ಬರದ ರೂಪದಲ್ಲಿ ಏನೋ ಸಿಗುತ್ತದೆ ಎಂದು ಉಪಯೋಗ ಮಾಡಿಕೊಳ್ಳುತ್ತಿದ್ದರು. ಅದರೆ ಈಗ ಇದ್ದಕ್ಕಿದ್ದಹಾಗೆ ಆ ಕಾರ್ಖಾನೆಯಲ್ಲಿ ಕೋಟ್ಯಾಂತರ ರೂಪಾಯಿಯ ಅವ್ಯವಹಾರಗಳು ನಡೆದು ಲೂಟಿ ನಡೆಯುತ್ತಿದೆ. ಅದು ಬೇರೆ ವಿಷಯ. ಆ ಪ್ರಸ್ತಾಪಕ್ಕೆ ನಾನು ಹೋಗುವುದಿಲ್ಲ. ಆದರೆ ಇವತ್ತು ಸರ್ಕಾರಕ್ಕೆ ನಾನು ವಿನಂತಿ ಮಾಡುತ್ತಿರುವುದೇನೆಂದರೆ ಇದು ಜಿಪ್ಸಂ ಎಂದು ಹೇಳಿ ಶಂಕರ್ ಟ್ರೇಡಿಂಗ್ ಕಂಪನಿಯವರು ಕೋಟ್ಯಾಂತರ ರೂಪಾಯಿಯನ್ನು ಸಂಪಾದನೆ ಮಾಡುವುದಕ್ಕೆ

ಹೊರಟಿದ್ದಾರೆ. ಮತ್ತು ಅಲ್ಲಿರತಕ್ಕಂತಹ ಉನ್ನತಾಧಿಕಾರಿಗಳು ಈ ಅವ್ಯವಹಾರದಲ್ಲಿ ಶಾಮೀಲಾಗಿದ್ದಾರೆ. ಇದರಿಂದ ರೈತರಿಗೂ ಸಹ ದೊಡ್ಡ ಮೋಸವಾಗುತ್ತಿದೆ. ಅಲ್ಲಿ ಇರುವಂತಹ ಪ್ರಗತಿಪರ ರೈತರುಗಳು ಇದರ ಗಮನ ಸೆಳೆದು, ಕಾರ್ಖಾನೆಯ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕ ಮಾಡಿ ಈ ರೀತಿ ಆಗದಂತೆ ನೋಡಿಕೊಳ್ಳಬೇಕೆಂದು ವಿನಂತಿ ಮಾಡಿದ್ದಾರೆ. ಆದುದರಿಂದ ನಿಮಗೆ ಏನಾದರೂ ಇದರಿಂದ ಕೋಟ್ಯಾಂತರ ರೂಪಾಯಿ ಆದಾಯ ಬರುವುದಿದ್ದರೆ, ಇದನ್ನು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ತನಿಖೆ ಮಾಡಿಸಿ, ಅದು ರೈತಾಪಿ ಕೆಲಸಕ್ಕೆ ಉಪಯೋಗವಾಗುತ್ತದೆ ಎನ್ನುವುದಾದರೆ ಅದಕ್ಕೆ ಬೇರೆ ರೂಪದಲ್ಲಿ ಒಂದು ಬೆಲೆ ನಿಗದಿ ಮಾಡಿ ಅದನ್ನು ರೈತರಿಗೆ ಹಂಚಿ. ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಆದರೆ ಇವತ್ತು ಒಂದು ಕಡೆ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಯ ಮೋಸವಾಗುತ್ತಿದೆ, ಮತ್ತೊಂದು ಕಡೆ ರೈತನಿಗೆ ಮೋಸವಾಗುತ್ತಿದೆ. ಅದರ ಬಗ್ಗೆ ನೀವು ನಮಗೆ ವಿವರ ಕೊಡುತ್ತೀರಾ?

ನೀವು ಯಾವಾಗ ಟೆಂಡರ್ ಕರೆದಿದ್ದೀರಿ? ಯಾರ್ಯಾರು ಕೊಟೇಶನ್ ಹಾಕಿದ್ದರು. ಅದು ಎಷ್ಟಕ್ಕೆ ಟೆಂಡರ್ ಆಗಿದೆ ಎಂದು ಹೇಳಿ. ತಾವು ಆ ಭಾಗದಲ್ಲಿ ಪ್ರವಾಸ ಮಾಡಿದರೆ, ಉತ್ತರ ಕರ್ನಾಟಕದಲ್ಲಿ ಜಿಪ್ಸಂ ಎಂದು ಮಾರುತ್ತಿರುವುದರ ಬಗ್ಗೆ ಅನೇಕ ರೈತರು ನನಗೆ ಪತ್ರ ಬರೆದಿದ್ದಾರೆ. ಅದರ ಮಾಹಿತಿ ನಿಮಗೆ ನಾನು ಕೊಡುತ್ತೇನೆ. ದಯಮಾಡಿ ತಾವು ಇದಕ್ಕೆ ವಿವರಗಳನ್ನು ಒದಗಿಸಿಕೊಡಬೇಕು. ಇದನ್ನು ಎಲ್ಲೂ ಕೂಡ ಶೇಖರಣೆ ಮಾಡುತ್ತಿರಲಿಲ್ಲ, ಈಗಲೂ ಕೂಡ ತಾವು ಬಂದು ನೋಡಿ. ವೇಸ್ಟ್ ಆದಂತ ಸಾವಿರಾರು ಲೋಡ್ ರಸ್ತೆಯಲ್ಲಿ ಬಿದ್ದಿದೆ. ನಿವು ಯಾರೋ ಒಬ್ಬರು ಕೋಟ್ಯಾಧೀಶನಾಗುವಂತಹ ಕೆಲಸವನ್ನು ನಮ್ಮ ಸರ್ಕಾರ ಮಾಡಬಾರದು. ಅದಕ್ಕೋಸ್ಕರ ಇದರ ಬಗ್ಗೆ ವಿವರವಾದಂತಹ ಮಾಹಿತಿಯನ್ನು ತಾವು ಕೊಡಬೇಕು.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ:- ಮಾನ್ಯ ಅಧ್ಯಕ್ಷರೇ, 1981-82ರಲ್ಲಿ ಮೈಸೂರು ಪೇಪರ್ ಮಿಲ್ಸ್ ಎಕ್ಸ್‌ಪ್ಯಾನ್‌ಷನ್ ಪ್ರಾಜೆಕ್ಟ್ ಆದಮೇಲೆ ಈ ಒಂದು ಶೇಖರಣೆ ಪ್ರಾರಂಭವಾಯಿತು. ಇದನ್ನು ಏನು ವೇಸ್ಟ್ ಲೈಂ ಎಂದು ಹೇಳುತ್ತಾರೆ ಅದನ್ನು ಅಲ್ಲಿ ಶೇಖರಿಸಲಿಕ್ಕೆ ಪ್ರಾರಂಭವಾಯಿತು. ತದನಂತರ ಈ ಶೇಖರಣೆ ಮಾಡಿದ ವೇಸ್ಟ್ ಲೈಂನ್ನು ಬೇರೆಯವರಿಗೆ ಮಾರಾಟ ಮಾಡುವುದಕ್ಕೆ ಸಾಧ್ಯತೆ ಇದೆಯೇ ಎನ್ನುವುದನ್ನು ಪರಿಶೀಲಿಸಿ ಟೆಂಡರನ್ನು ಸಹ ಮೊದಲು ಕಾಲ್‌ಫಾರ್ ಮಾಡಿದ್ದರು. ಆದರೆ ಆಗ ಅದಕ್ಕೆ ಏನು ರೆಸ್‌ಪಾನ್ಸ್ ಬರಲಿಲ್ಲ. We tried with Cement Industries also. ಇದು ಅವರಿಗೆ ಏನಾದರೂ ಉಪಯೋಗವಾಗುತ್ತದೆಯೇನೋ ಎಂದು ಸಹ ಪರಿಶೀಲನೆ ಮಾಡಲಾಯಿತು. ಆದರೆ ಅವರು ಸಹ ಟ್ರಾನ್ಸ್‌ಪೋರ್ಟೇಷನ್‌ಗೆ ಹೆಚ್ಚು ಮೊತ್ತ ಚೇಕಾಗಿರುವುದರಿಂದ, ಇದು ಅನ್‌ಎಕನಾಮಿಕಲ್ ಆಗುತ್ತದೆ ಎಂದು ತೆಗೆದುಕೊಳ್ಳಲಿಲ್ಲ. ಆದರೆ ಇದು ಒಂದು ವರ್ಷದ ಹಿಂದೆ ಎಲ್ಲರೂ ಫ್ರೀಯಾಗಿ ಯಾರಿಗೆ ಎಷ್ಟು ಬೇಕೋ ಅಷ್ಟನ್ನು ತೆಗೆದುಕೊಂಡು ಹೋಗುತ್ತಿದ್ದರು. ಆಗ ಇದಕ್ಕೂ ಸಹ ಬೆಲೆ ಇದೆ ಎಂದು ತಿಳಿದುಕೊಂಡು ನಂತರ ಒಂದು ಟೆಂಡರನ್ನು ಕಾಲ್‌ಫಾರ್ ಮಾಡಿದರು. ಇದರಲ್ಲಿ ಮ್ಯಾಗ್ನಿಮಂ ರೇಟ್ ಯಾರು ಕೋಟ್ ಮಾಡಿದರು ಅವರಿಗೆ ಅಲ್ಲಿ ಇರತಕ್ಕಂತಹ ಅಪ್ರಾಕ್ಸಿಮೇಟ್ ಆಗಿ 40 ಸಾವಿರ ಕ್ಯೂಬಿಕ್ ಮೀಟರ್ ಟನ್ಸ್ ಏರಿಯಾ ಇರುವುದು ಎಂದು ತಿಳಿದುಕೊಂಡು ಅದನ್ನು 4.51 ಲಕ್ಷಕ್ಕೆ ಒಂದು ವರ್ಷಕ್ಕೆ ಇದನ್ನು ಕೊಡಲಾಗಿದೆ. ಈಗಲೂ ಸಹ ನಾವು ನಮ್ಮ ಕಂಪನಿಯ ಒಳಾಂಗಣದಿಂದ ಹೊರಗಡೆಗೆ ಈ ವೇಸ್ಟ್ ಲೈಂನ್ನು ತೆಗೆದುಕೊಂಡು ಹೋಗಿ ಹಾಕುವುದಕ್ಕೆ 14 ಲಕ್ಷ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಆ ರೀತಿಯಿಂದ ನಾವು ಈ ನಾಲ್ಕೂವರೆ ಲಕ್ಷ ರೂಪಾಯಿ ಬಂದರೂ ಸಹ ಸ್ವಲ್ಪ ಆದಾಯ ಬರುತ್ತದೆ ಎನ್ನುವಂತಹ ದೃಷ್ಟಿಯಿಂದ ಇದನ್ನು ಅವರಿಗೆ ವಹಿಸಿಕೊಡಲಾಯಿತು. ಮತ್ತು ಈ ವೇಸ್ಟ್ ಲೈಂನಲ್ಲಿ ಕ್ಯಾಲ್ಸಿಯಂ ಕಾರ್ಬೊನೇಟ್ ಇರುತ್ತದೆ ಮತ್ತು ಜಿಪ್ಸಂನಲ್ಲಿ ಕ್ಯಾಲ್ಸಿಯಂ ಸಲ್ಫೇಟ್ ಇರುತ್ತದೆ. ಇವೆರಡಕ್ಕೂ ಬಹಳ ವ್ಯತ್ಯಾಸ ಇದೆ. ಆದರೆ ಇದನ್ನು ಮ್ಯೂಟ್ರಲೈಜಿಂಗ್ ಏಜೆಂಟ್ ಆಗಿ ಅಸಿಡಿಟಿ ಜಾಸ್ತಿ ಇರುವ ಕಡೆ ಮೆನ್ಯೂರ್‌ಗೆ ಸ್ವಲ್ಪ ಮಿಕ್ಸ್‌ಮಾಡಿ ನಮ್ಮ 'ಕಾಫಿ' ಪ್ಲಾಂಟರ್ಸ್ ಹೆಚ್ಚಿಗೆ ಉಪಯೋಗ ಮಾಡುತ್ತಾರೆ ಎಂದು ತಿಳಿದುಬಂದಿದೆ. ಆದರೆ ತಾವು ಈಗ ಒಂದು ಒಳ್ಳೆಯ ಸಲಹೆ ಕೊಟ್ಟಿದ್ದೀರಿ. ಅದರ ಪ್ರಕಾರ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನ ಕಡೆಯಿಂದ ಇದನ್ನು ತನಿಖೆ ಮಾಡಿಸಿ

ಇದರಿಂದ ಏನಾದರೂ ಬೆಲೆ ಬರುತ್ತದೆಯೇ ಅಥವಾ ಗೊಬ್ಬರದ ಜೊತೆ ಹಾಕಿದರೆ ಇದು ಏನಾದರೂ ಇನ್ನು ಹೆಚ್ಚಿನ ರೀತಿಯಲ್ಲಿ ನಮ್ಮ ರೈತರಿಗೆ ಉಪಯೋಗ ಆಗುತ್ತದೆಯೇ ಎನ್ನುವ ಬಗ್ಗೆ ಖಂಡಿತಾ ಪರಿಶೀಲನೆ ಮಾಡೋಣ. ಈಗ ನಮಗೆ ತಿಳಿದಿರುವ ಮಟ್ಟಿಗೆ ಇದು ಜಿಪ್ಸಮಂ ಆಗಿ ಉತ್ತರ ಕರ್ನಾಟಕದಲ್ಲಿ ಮಾರಾಟ ಆಗುತ್ತದೆ ಎನ್ನುವುದಕ್ಕೆ ನಮಗೆ ಯಾವ ದಾಖಲೆಗಳು ಸಹ ಇಲ್ಲ.

ಶ್ರೀ ಯಡಿಯೂರಪ್ಪ:- ಸನ್ಮಾನ್ಯ ಅಧ್ಯಕ್ಷರೇ, ಇದರಲ್ಲಿ 2-3 ಪ್ರಮುಖವಾದಂತಹ ಅಂಶಗಳು ಇವೆ. ಸನ್ಮಾನ್ಯ ಸಚಿವರು ಹೇಳಿದಂತೆ 81-82ನೇ ಸಾಲಿನಲ್ಲಿ ಈ ಸುಣ್ಣದ ಪುಡಿಯನ್ನು ವೇಸ್ಟ್ ಎಂದು ಹೇಳಿ ಹೊರಗಡೆ ಹಾಕುತ್ತಿದ್ದರು. ನನಗೆ ವಹಿಸಿಕೊಡಿ ಒಂದು ವರ್ಷಕ್ಕೆ ಹತ್ತು ಲಕ್ಷವನ್ನು ನಾನು ನಿಮ್ಮ ಕಾರ್ಖಾನೆಗೆ ಕೊಡುವುದಕ್ಕೆ ಸಿದ್ಧನಿದ್ದೇನೆ. ಒಳಗಡೆಯೇ ಟೆಂಡರ್ ಕರೆಯುವುದಕ್ಕೆ ವ್ಯವಹಾರ ಮಾಡಿಕೊಂಡು ಯಾರಿಗೂ ಅದನ್ನು ಮಾರುವುದಿಲ್ಲವೆಂದು ಹೇಳಿದ್ದರು. ರೈತರು ಅದನ್ನು ಉಪಯೋಗ ಮಾಡಿಕೊಳ್ಳುತ್ತಿದ್ದರು. ನನ್ನ ಮೂಲ ಪ್ರಶ್ನೆ ಏನೆಂದರೆ ವ್ಯವಸ್ಥಿತವಾದ ರೀತಿಯಲ್ಲಿ ಟೆಂಡರ್ ಕರೆದು ಸರ್ಕಾರಕ್ಕೆ, ನಿಮ್ಮ ಕಾರ್ಖಾನೆಗೆ ಆದಾಯ ಬರುವ ಹಾಗೆ ಮಾಡುವುದಕ್ಕೆ ನೀವು ಪ್ರಯತ್ನ ಮಾಡಿ. ಅದು ರೈತರಿಗೆ ಉಪಯೋಗವಾಗುವುದಾದರೆ ಅದನ್ನು ಪ್ರಚುರಪಡಿಸಿ. ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಮತ್ತು ನೀವು ಸೇರಿ ವ್ಯವಹಾರ ನಡೆಸಿ. ನಾನು ಜವಾಬ್ದಾರಿ ಸ್ಥಾನದಲ್ಲಿ ನಿಂತುಕೊಂಡು ಮಾತನಾಡುತ್ತಿದ್ದೇನೆ. ಇವತ್ತು ರೈತ ಜಿಪ್ಸಂ ಎಂದು ಮೋಸ ಹೋಗುತ್ತಿದ್ದಾನೆ. ಕೋಟ್ಯಾಂತರ ರೂಪಾಯಿಗಳನ್ನು ಈ ಶಂಕರ್ ಟ್ರೇಡಿಂಗ್ ಕಂಪನಿ ಲೂಟಿ ಮಾಡಿದೆ. ಅಲ್ಲಿ ಹಗಲು ದರೋಡೆ ನಡೆಯುತ್ತಿದೆ. ಕಾರ್ಖಾನೆಯ ಸಿಬ್ಬಂದಿ ಮತ್ತು ಇತರ ಪ್ರಮುಖರು ಇದರಲ್ಲಿ ಶಾಮೀಲಾಗಿದ್ದಾರೆ. ಅಲ್ಲಿಗೆ ನಾನು ಅನೇಕ ಸಂದರ್ಭದಲ್ಲಿ ಭೇಟಿ ಮಾಡಿದ್ದೇನೆ. ಅದರ ವಿವರ ನನಗೆ ಗೊತ್ತಿದೆ. ಅದಕ್ಕೆ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ರೈತರಿಗೆ ಗೊತ್ತಿಲ್ಲದೆ ಅದು ಜಿಪ್ಸಂ ಅಥವ ಇನ್ನೇನಾದರೂ ಇರಬಹುದು ಅದು ಹೊಸ ಚೀಲದಲ್ಲಿ ದೊಡ್ಡ ಪ್ರಮಾಣದಲ್ಲಿ ಮಾರಾಟವಾಗುತ್ತಿರುವುದು ನಿಜ. ಇಲ್ಲದೆ ಹೋದರೆ ಅವನು ಏಕೆ ತೆಗೆದುಕೊಂಡು ಹೋಗುತ್ತಿದ್ದ. ಇದರಲ್ಲಿ ಎರಡು ಸಂಗತಿ ಇದೆ. ನೀವು ಇದನ್ನು ಸರಿಯಾದ ರೀತಿಯಲ್ಲಿ ವ್ಯವಹರಿಸಿದರೆ ಕೋಟ್ಯಾಂತರ ರೂಪಾಯಿಗಳು ನಿಮ್ಮ ಕಾರ್ಖಾನೆಗೆ ಆದಾಯ ಬರುತ್ತದೆ. ಅದು ರೈತನಿಗೆ ಉಪಯೋಗವಾಗುತ್ತದೆ ಎಂದು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನವರಿಗೆ ಮನವರಿಕೆಯಾಗಿ ಇದನ್ನು ಸರಿಯಾದ ರೀತಿಯಲ್ಲಿ ವಿತರಣೆ ಮಾಡುವ ವ್ಯವಸ್ಥೆ ಮಾಡಿದರೆ ರೈತನು ಅದನ್ನು ಹೊಲಕ್ಕೆ ಉಪಯೋಗ ಮಾಡಿಕೊಳ್ಳಬಹುದು ಮತ್ತು ಹೆಚ್ಚು ಬೆಳೆ ಬೆಳೆಯುವುದಕ್ಕೆ ಅನುಕೂಲ ಆಗುತ್ತದೆ. ಮಧ್ಯದ ವ್ಯಕ್ತಿ ಕೋಟ್ಯಾಧಿಪತಿಯಾಗಬಾರದು ಎನ್ನವ ದೃಷ್ಟಿಯಿಂದ ಈ ಮಾತನ್ನು ನಾನು ಹೇಳುತ್ತಿದ್ದೇನೆ. ಅಕಸ್ಮಾತಾಗಿ ಪುಕ್ಕಟೆಯಾಗಿ ಇದನ್ನು ಯಾರಾದರೂ ಹೊಲಕ್ಕೆ ಹಾಕಿಕೊಳ್ಳುತ್ತಾ ಇರಬಹುದು. ಅದರಿಂದಾಗಿ ಕೆಟ್ಟ ಪರಿಣಾಮವಾಗಿ ಭೂಮಿ ಹಾಳಾಗಿ ಬೆಳೆ ನಾಶವಾಗುತ್ತಿದೆ ಮತ್ತು ಅದರಿಂದ ಬೇರೆ ರೀತಿಯ ರೋಗ ರುಜಿನಗಳು ಬರಲು ಅವಕಾಶವಾದರೂ ಆಗಬಹುದು. ಅದನ್ನು ತಾವು ಗಂಭೀರವಾಗಿ ಪರಿಗಣಿಸಿ ಸರಿಯಾದ ರೀತಿಯಲ್ಲಿ ಎಲ್ಲರಿಗೂ ತಿಳುವಳಿಕೆ ಕೊಟ್ಟು ಅದನ್ನು ಹರಾಜು ಮಾಡಿಸಿ. ಇಲ್ಲವಾದರೆ ವರ್ಷಕ್ಕೆ ನಾಲ್ಕೂವರೆ ಲಕ್ಷಕ್ಕೆ ಯಾರೂ ಬರುವುದಿಲ್ಲವೆಂದು ನಾನು 10 ಲಕ್ಷ ರೂಪಾಯಿಯನ್ನು ನನ್ನ ಸ್ನೇಹಿತರ ಹತ್ತಿರ ಡಿಪಾಸಿಟ್ ಮಾಡಿಸುತ್ತೇನೆ. ನಾನು ಏಕೆ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ ಭದ್ರಾವತಿ ಕಾರ್ಖಾನೆಯಲ್ಲಿ ಕೋಟ್ಯಾಂತರ ರೂಪಾಯಿಗಳು ಅವ್ಯವಹಾರ ನಡೆಯುತ್ತಿದೆ. ಕೇವಲ ನಾಲ್ಕೂವರೆ ಲಕ್ಷ ರೂಪಾಯಿ ಆದಾಯವಾಗುತ್ತಿದೆ ಎಂದು ಅವರಿಗೆ ಜ್ಞಾನೋದಯವಾಗಿ ಕಾರ್ಖಾನೆ ಉಳಿಸುವುದಕ್ಕೆ ಮಾಡಿದ್ದಲ್ಲ. ಇದರಲ್ಲಿ ಎರಡು ಪರಿಣಾಮವಾಗುತ್ತಿದೆ. ಅದು ನಿಜವಾಗಿ ಬೆಲೆಬಾಳುವ ವಸ್ತುವಾದರೆ ನಿಮ್ಮ ಕಾರ್ಖಾನೆಗೆ ಕೋಟ್ಯಾಂತರ ರೂಪಾಯಿಗಳು ಬರುವ ಲಾಭ ಹಾಳಾಗುತ್ತಿದೆ. ರೈತಾಪಿ ಜನರಿಗೆ ಉಪಯುಕ್ತವಾಗದೇ ಇದ್ದರೆ ರೈತನಿಗೆ ಶೋಷಣೆ ಮಾಡಿದಂತೆ ಆಗುತ್ತವೆ. ಆ ಜಿಪ್ಸಂ ಹೊಸ ಚೀಲದಲ್ಲಿ ಮಾರುತ್ತಿರುವುದು ನಿಜ. ಅದಕ್ಕೆ ಪುರಾವೆಯನ್ನು ನಾನು ಕೊಡುತ್ತೇನೆ. ಆದುದರಿಂದ ತಕ್ಷಣ ಅಲ್ಲಿ ತೆಗೆದುಕೊಂಡು ಹೋಗುವುದಕ್ಕೆ ತಡೆಯಾಜ್ಞೆ ಕೊಡಿ. ಅದನ್ನು ಪರಿಶೀಲನೆ ಮಾಡಿ, ಟೆಂಡರ್ ಕರೆಯಿರಿ ರೈತನಿಗೆ ಉಪಯೋಗವಾಗುವುದಾದರೆ

ರೈತನಿಗೆ ವಿತರಿಸಿ ಅಥವ ಬೇರೆ ರೀತಿ ಸುಣ್ಣದ ಪುಡಿಯಾಗಿ ಉಪಯೋಗವಾಗುವುದಾದರೆ ಅದೇ ರೀತಿ ಮಾಡಿ ನನ್ನದೇನು ಅಭ್ಯಂತರವಿಲ್ಲ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ:- ಮಾನ್ಯ ಅಧ್ಯಕ್ಷರೇ, ಟೆಂಡರ್ ಕರೆಯಬೇಕೆಂದು ಅವರು ಹೇಳುತ್ತಾರೆ. ಈಗಾಗಲೇ ಅಲ್ಲಿ ವ್ಯವಸ್ಥಿತವಾಗಿ ಅದು ನಡೆದಿದೆ. ಟೆಂಡರ್ ಕರೆದಿದೆ. higest bidder ಮತ್ತೆ ಟೆಂಡರ್ ಕರೆದಾಗ ಹತ್ತು ಲಕ್ಷ ಅಥವ ಇಪ್ಪತ್ತು ಲಕ್ಷಕ್ಕೆ ಯಾರು ಬೇಕಾದರೂ ಬಿಡ್ ಮಾಡಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಟೆಂಡರ್ ಕರೆದಿರುವುದು ಯಾವಾಗ, ಅದು ಮುಕ್ತಾಯವಾಗುವುದು ಯಾವಾಗ.

ಶ್ರೀಮತಿ ನಾಗಮ್ಮ ಸಿ, ಕೇಶವಮೂರ್ತಿ:- ಡೀಟೈಲ್ಸ್ ನನ್ನ ಹತ್ತಿರ ಇಲ್ಲ. ನಾನು ತಮಗೆ ಒದಗಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಅದೇ ಬಹಳ ಪ್ರಾಮುಖ್ಯವಾದಂಥದ್ದು ಏಕೆಂದರೆ 10-15 ವರ್ಷದಿಂದ ಅಲ್ಲಿ ಶೇಖರಣೆ ಆಗಿರುವುದಕ್ಕೆ ಒಂದು ವರ್ಷಕ್ಕೆ ನಾಲ್ಕೂವರೆ ಲಕ್ಷಕ್ಕೆ ಕೊಟ್ಟು ಕೋಟ್ಯಾಂತರ ರೂಪಾಯಿಗಳು ಲೂಟಿ ಮಾಡಿದ್ದಾರೆ. ನಿಮ್ಮ ಕಾರ್ಖಾನೆ ಹೇಗೆ ಲಾಭ ಮಾಡಿದಂತೆ ಆಯಿತು.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ:- ಶ್ರೀಯುತ ಯಡಿಯೂರಪ್ಪನವರೆ ಇದು ಪ್ರತಿ ವರ್ಷ ನಡೆಯುತ್ತಾ ಇರುವಂಥದ್ದು. ಒಂದು ವರ್ಷಕ್ಕೆ ಇಷ್ಟು ಬೆಲೆ ಅವರು ಬಿಡ್ ಮಾಡುತ್ತಿದ್ದಾರೆ. ಮುಂದೆ ಮತ್ತೆ ಟೆಂಡರ್ ಕರೆದಾಗ ಯಾರು ಬೇಕಾದರೂ 10 ಲಕ್ಷ ಅಲ್ಲ 20 ಬಿಡ್ ಮಾಡಿ they can get.

ಶ್ರೀ ಬಿ.ಎಸ್. ಯಡಿಯೂರಪ್ಪ:- ಟೆಂಡರ್‌ನ ಷರತ್ತು ಏನು, ಯಾರಿಗೆ ಹರಾಜು ಆಯಿತು ಎಷ್ಟು ವರ್ಷಕ್ಕೆ ಕೊಟ್ಟಿದ್ದಾರೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ:-ನಾನು ನಿಮಗೆ ಅದನ್ನು ತರಿಸಿಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಎಷ್ಟಕ್ಕೆ ಟೆಂಡರ್ ಕರೆದಿದ್ದಾರೆ, ಎಷ್ಟು ವರ್ಷಕ್ಕೆ ಟೆಂಡರ್ ಕರೆದಿದ್ದಾರೆ ಇದರ ವಿವರ ನಮಗೆ ಕಳುಹಿಸಿಕೊಡದಿದ್ದರೆ ಈ ಪ್ರಶ್ನೆಯನ್ನು ನಾನು ಇಲ್ಲಿ ಪ್ರಸ್ತಾಪ ಮಾಡಿದ ಮುಖ್ಯ ಉದ್ದೇಶ ಸಫಲವಾಗುವುದಿಲ್ಲ ಅದರೆ ನಿಮ್ಮ ಅಧಿಕಾರಿಗಳಿಗೆ ಇದು ಗೊತ್ತಿಲ್ಲವೇ. ಎಷ್ಟಕ್ಕೆ ಗುತ್ತಿಗೆ ಕೊಟ್ಟರು ಏಕೆ ಗುತ್ತಿಗೆ ಕೊಟ್ಟಿರಿ, ಇದರ ವಿವರ ನೀವು ಒದಗಿಸಿಕೊಡಲಿಲ್ಲ ಎಂದರೆ ಅಧಿಕಾರಿಗಳು ಇದರಲ್ಲಿ ಷಾಮೀಲಾಗಿದ್ದಾರೆ ಎನ್ನುವುದಕ್ಕೆ ಇದಕ್ಕಿಂದ ಹೆಚ್ಚು ಪುರಾವೆ ಬೇಡ.

ಶ್ರೀಮತಿ ನಾಗಮ್ಮ ಕೇಶವಮೂರ್ತಿ:- ಈಗ ನನ್ನ ಹತ್ತಿರ ಇಲ್ಲ ಕೂಡಲೆ ಕಳುಹಿಸಿಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅಧ್ಯಕ್ಷರೇ ಬೇರೆ ರೂಪದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಿ ಬೇಕಾದರೆ ಅಥವಾ ಸಂಪೂರ್ಣ ಮಾಹಿತಿ ಒದಗಿಸಿಕೊಂಡು ಇಲ್ಲಿ ಬರಲಿ. ನನ್ನ ನೇರವಾದ ಪ್ರಶ್ನೆ ಇಷ್ಟೆ. ಏಕೆ ಹರಾಜು ಆಯಿತು ಎಷ್ಟು ವರ್ಷಕ್ಕೋಸ್ಕರ ಇದನ್ನು ಗುತ್ತಿಗೆಗೆ ಕೊಟ್ಟಿದ್ದಾರೆ. ಇದರ ಬಗ್ಗೆ ಸ್ಪಷ್ಟನೆ ನೀವು ಕೊಡಬೇಕು. ಸನ್ಮಾನ್ಯ ಅಧ್ಯಕ್ಷರೇ ಅಲ್ಲಿಗೆ ತಾವು ಸದನದ ಸಮಿತಿ ಮಾಡಿ ಕಳುಹಿಸಿಕೊಡಿ ಅಲ್ಲಿ ಸುಮಾರು ಕಿಲೋ ಮೀಟರ್ ಉದ್ದಕ್ಕೆ ಸುಣ್ಣದ ಮಡಿ ಬಿದ್ದಿದೆ. ನಾನು ಆ ಜಿಲ್ಲೆಯಿಂದ ಬಂದವನು ಅಲ್ಲಿಯ ಸಮಸ್ಯೆ ನನಗೆ ಗೊತ್ತಿದೆ ಯಾವ ರೀತಿ ದುರುಪಯೋಗವಾಗುತ್ತಿದೆ ಎನ್ನುವುದು ಗೊತ್ತಿದೆ. ತಮ್ಮಲ್ಲಿ ಮಾಹಿತಿ ಇದ್ದರೆ ಕೊಡಿ ಇಲ್ಲ ಬೇರೆ ರೂಪದಲ್ಲಿ ಬೇರೆ ಸಮಯದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಿ. ಅಧ್ಯಕ್ಷರೆ ಬೇಕಾದರೆ ನಾಳೆ ಪ್ರಸ್ತಾಪ ಮಾಡುವುದಕ್ಕೆ ರೆಡಿ ಇದ್ದೇನೆ, ಇನ್ನೂ ಹೆಚ್ಚು ಮಾಹಿತಿಯನ್ನು ನಾನು ಒದಗಿಸಿಕೊಡುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ :- ಖಂಡಿತವಾಗಿ ಅದನ್ನು ತರಿಸಿಕೊಡೋಣ. ಮುಖ್ಯವಾಗಿ ಈ ಜಿಪ್ಸಮ್ ಮಾರುತ್ತಿದ್ದಾರೆ ಎಂಬ ಬಗ್ಗೆ ಈಗ ತಾನೆ ಹೇಳಿದ್ದೀರಿ, ಅದರ ಬಗ್ಗೆ ತಮ್ಮ ಹತ್ತಿರ ದಾಖಲೆಗಳು ಮತ್ತು ಪತ್ರಗಳು ಇದ್ದರೆ ಅವುಗಳನ್ನು ದಯವಿಟ್ಟು ಕಳುಹಿಸಿಕೊಡಿ ನಾನು ಖಂಡಿತವಾಗಿ ವಿಚಾರಮಾಡಿ ಏನಾದರೂ ಅಕ್ರಮಗಳು ನಡೆದಿದ್ದರೆ ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ ತಾವು ನಮ್ಮ ರಕ್ಷಣೆಗೆ ಬರಬೇಕು. ನಾನು ಒಬ್ಬ ಶಾಸಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನ್ನ ಜಿಲ್ಲೆಯಲ್ಲಿರತಕ್ಕ ಆ ಕಾರ್ಖಾನೆ ಉಳಿಯಬೇಕು, ನಮ್ಮ ನಾಡಿನ ರೈತ ಉಳಿಯಬೇಕು ಎಂಬ ಉದ್ದೇಶದಿಂದ ಪ್ರಸ್ತಾಪಮಾಡಿದ್ದೇನೆ. ಜವಾಬ್ದಾರಿವುಳ್ಳವರಾದ ಪ್ರಫುಲ್ಲ ಚಂದ್ರ ಎಂಬುವರು ಸಾಕಷ್ಟು ರೈತಾಪಿ ಕೆಲಸಗಳಲ್ಲಿ ಪರಿಣತರಾದ ವ್ಯಕ್ತಿ ಅವರು ಒಂದು ಪತ್ರ ಬರೆದು ಇದನ್ನು ತಕ್ಷಣ ಗಮನಿಸಬೇಕು ಎಂದು ಹೇಳಿದ್ದಾರೆ. ಆದ್ದರಿಂದ ನಾನು ಈಗ 15 ದಿವಸಗಳ ಹಿಂದೆ ನೋಟಿಸ್ ಕೊಟ್ಟು ಅದುಬರುವ ಹಾಗೆ ಮಾಡಿ, ಈಗ ಅದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಇಷ್ಟಾದರೂ ಕೂಡ ಸರ್ಕಾರ ನನ್ನ ಕೆಲವು ಪ್ರಶ್ನೆಗಳಿಗೆ ಉತ್ತರ ಕೊಡದಿದ್ದರೆ ಹೇಗೆ? ಎಷ್ಟು ವರ್ಷಕ್ಕೆ ಹರಾಜಾಯಿತು? ಯಾರಿಗೆ ಹರಾಜಾಯಿತು? ಷರತ್ತುಗಳು ಏನು ಎಂಬುದನ್ನು ಹೇಳುವುದಿಲ್ಲ ಎಂದರೆ ಅಲ್ಲಿರತಕ್ಕ ಏಜನ್ಸಿಗಳು, ಅಧಿಕಾರಿಗಳು ಶಾಮಿಲಾಗಿ ರೈತರಿಗೆ ಮೋಸ ಮಾಡುತ್ತಿದ್ದಾರೆ, ಕಾರ್ಖಾನೆಗೆ ಬರತಕ್ಕ ಕೋಟ್ಯಾಂತರ ರೂಪಾಯಿಗಳನ್ನು ಲೂಟಿ ಮಾಡುತ್ತಿದ್ದಾರೆ ಎಂದು ಹೇಳಬೇಕಾಗುತ್ತದೆ. ತಾವು ಬೇರೆ ಸಂದರ್ಭದಲ್ಲಿ ಉತ್ತರಕೊಡಿ.

ಶ್ರೀ ಎಸ್.ಎಂ. ಕೃಷ್ಣ :- ಮಾನ್ಯ ಸಚಿವೆಯರು ಹೇಳುವುದಿಲ್ಲ ಎಂದು ಹೇಳಲಿಲ್ಲ. ಈಗ ನೀವು ಅಧಿಕಾರಿಗಳು ಏನೋ ಶಾಮಿಲಾಗಿದ್ದಾರೆ ಎನ್ನತಕ್ಕ ರೀತಿಯಲ್ಲಿ ಇದೆ ಎಂದು ಅವರು ಏನು ಹೇಳಿದ್ದಾರೆ ಇದರ ಬಗ್ಗೆ ನಾನು ಹೆಚ್ಚು ಮಾಹಿತಿಯನ್ನು ತರಿಸಿ ತಮಗೆ ಒದಗಿಸುತ್ತೇನೆಂದು ಹೇಳಿದ್ದಾರೆ. ಈಗ ಸದನದ ಮುಂದೆ ಕೈಗಾರಿಕೆ ಹಾಗೂ ಮಧ್ಯಮ ಕೈಗಾರಿಕೆ ಹಾಗೂ ಸಣ್ಣ ಕೈಗಾರಿಕೆಗಳ ಬೇಡಿಕೆಗಳು ಬರುತ್ತಿವೆ. ಇವೊತ್ತು ನಾಳೆ ಆಗತಕ್ಕ ಚರ್ಚಾ ಸಮಯದಲ್ಲಿ ಇದರ ಬಗ್ಗೆ ತಾವು ಪ್ರಸ್ತಾಪ ಮಾಡಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ :- ಇಲ್ಲಿ ಒಂದು ಅಂಶವನ್ನು ತಾವು ಗಮನಿಸಬೇಕು. ಇಂಥ ಪ್ರಾಮುಖ್ಯವಾದ ವಿಷಯವನ್ನು ಕಾಲಿಂಗ್ ಅಟೆನ್‌ಷನ್‌ನಲ್ಲಿ ತಂದಾಗ ಅದಕ್ಕೆ ಬೇಕಾದ ಮಿನಿಮಮ್ ಮಾಹಿತಿಯನ್ನು ಅಧಿಕಾರಿಗಳು ಕೊಡುವುದಿಲ್ಲ ಎಂದರೆ ಅಧಿಕಾರಿಗಳ ಕೈವಾಡ ಇದೆ ಎಂದು ಹೇಳಬೇಕಾಗುತ್ತದೆ. ಮಂತ್ರಿಗಳು ಮೊನ್ನೆ ಬಂದಿರತಕ್ಕವರು ಅವರು ಏನು ಮಾಡುತ್ತಾರೆ ಪಾಪ, ಎಲ್ಲಾ ಅಧಿಕಾರಿಗಳು ಮಾಡುವುದು.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ :- ಕಳೆದ ವರ್ಷ ಸಪ್ಟೆಂಬರ್‌ನಲ್ಲಿ ಕಾಲ್‌ಫಾರ್ ಮಾಡಿದರು. 12 ಜನ ಟೆಂಡರ್ ಹಾಕಿದ್ದರು ಹೈಯಸ್ಟ್ ಬಿಡ್ಡರ್‌ಗೆ ಇದನ್ನು ಕೊಟ್ಟರು, ಇದು ಒಂದು ವರ್ಷಕ್ಕೆ ಎಂದು ಹೇಳಿ ಕೊಟ್ಟಿದ್ದಾರೆ. ಈ ವರ್ಷ ಸೆಪ್ಟೆಂಬರ್‌ವರೆಗೆ ಮಾತ್ರ ಲಿಫ್ಟ್ ಮಾಡಲು ಅಧಿಕಾರ ಇದೆ.

ಬೆಳಗಾವಿ, ಸಂಕೇಶ್ವರ ಹುಕ್ಕೇರಿ ಮುಂತಾದ ಕಡೆಗಳಲ್ಲಿ ಕುಡಿಯುವ ನೀರನ್ನು ಒದಗಿಸುವುದು.

ಶ್ರೀ ಐ.ಎಂ.ಷೇಡ್‌ಶ್ಯಾಳ:- ಬೆಳಗಾಂ ಜಿಲ್ಲೆಯ ಬೆಳಗಾವಿ-ಸಂಕೇಶ್ವರ, ಹುಕ್ಕೇರಿ ಮುಂತಾದ ಕಡೆಗಳಲ್ಲಿ ನೀರು ಸರಬರಾಜಿಗೆ ಹಣ ಒದಗಿಸುವುದರಲ್ಲಿ ಉಂಟಾಗಿರುವ ತೊಂದರೆ ಬಗ್ಗೆ ಮಾನ್ಯ ನಗರಾಭಿವದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):- ಮಾನ್ಯ ಅಧ್ಯಕ್ಷರೇ,

1) ಬೆಳಗಾವಿ ಅಭಿವೃದ್ಧಿ ನೀರು ಸರಬರಾಜು ಯೋಜನೆ 3ನೇ ಹಂತ:-